# ಅಂಕಪಟ್ಟಿ ನೈಜತೆ ಪರಿಶೀಲನೆ

ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾಲೇಜುಗಳಿಗೆ ದಾಖಲಾದಾಗ ಸಂಬಂದಿಸಿದ ಪ್ರಾಧಿಕಾರ ಅಥವಾ ನೇಮಕಾತಿ ಪ್ರಾಧಿಕಾರಗಳು, ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ನೈಜತೆಯನ್ನು ದೃಢಪಡಿಸಿಕೊಳ್ಳಲು ಬಯಸಿದಲ್ಲಿ ಮೂಲಅಂಕಪಟ್ಟಿಯನ್ನು ಶುಲ್ಕದೊಂದಿಗೆ ಮಂಡಳಿಗೆ ರವಾನಿಸಿದರೆ ಮಂಡಳಿಯ ದಾಖಲೆಗಳೊಂದಿಗೆ ಅಂಕಪಟ್ಟಿ ನೈಜತೆಯನ್ನು ಪರಿಶೀಲಿಸಿ ವರದಿಯನ್ನು ಸಂಬಂಧಿಸಿದ ಕಛೇರಿಗೆ ರವಾನಿಸಲಾಗುವುದು.

## ನೈಜತೆ ಪರಿಶೀಲನೆ ಯಾರಿಗೆ?

ವಿದ್ಯಾರ್ಥಿಗಳು ಬೇರೆ ರಾಜ್ಯಗಳಿಗೆ ವಿದ್ಯಾಬ್ಯಾಸಕ್ಕೆ ತೆರಳಿದಾಗ ಅವರ ಅಂಕಪಟ್ಟಿಯ ನೈಜತೆ ಪರಿಶೀಲನೆ ಮಾಡುವಂತೆ ಮಂಡಳಿಗೆ ಸಂಬಂದಿಸಿದ ಶಿಕ್ಷಣ ಸಂಸ್ಥೆಗಳಿಂದ ಕೋರಿಕೆಗಳು ಬರುತ್ತವೆ.

ಅಭ್ಯರ್ಥಿಯ ನೇಮಕಾತಿ ಸಮಯದಲ್ಲಿ ,ಅವರ ಅಂಕಪಟ್ಟಿಯ ನೈಜತೆ ಪರಿಶೀಲನೆ ಮಾಡುವಂತೆ ಮಂಡಳಿಗೆ ನೇಮಕಾತಿ ಪ್ರಾಧಿಕಾರಗಳಿಂದ ಕೋರಿಕೆಗಳು ಬರುತ್ತವೆ.

## ಕಳಿಸಬೇಕಾದ ದಾಖಲೆಗಳು :

1. ಮೂಲಅಂಕಪಟ್ಟಿ
2. ನೇಮಕಾತಿ ಇಲ್ಲವೇ ದಾಖಲಾತಿ ಪ್ರಾಧಿಕಾರದ ಪತ್ರ
3. ಪರಿಶೀಲನಾ ಶುಲ್ಕ

## ಪರಿಶೀಲನಾ ಶುಲ್ಕ :

ಕೇಂದ್ರ ಕಛೇರಿಗೆ ಕಳಿಸುವಾಗ : ಪರಿಶೀಲನಾ ಶುಲ್ಕ ರೂ.100/– ಪರಿಶೀಲನಾ ಶುಲ್ಕವನ್ನು ಹುಂಡಿ ರೂಪದಲ್ಲಿ ಪಾವತಿಸಬೇಕು. ಹುಂಡಿಯನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ **"Secretary,KSEEB,Bangalore" Payable at Bangalore** ಎಂದು ಪಡೆದು ಸಲ್ಲಿಸಬೇಕು.

ವಿಭಾಗೀಯ ಕಛೇರಿಗೆ ಕಳಿಸುವಾಗ : ಪರಿಶೀಲನಾ ಶುಲ್ಕ ರೂ.100/– ಪರಿಶೀಲನಾ ಶುಲ್ಕವನ್ನು ಹುಂಡಿ ರೂಪದಲ್ಲಿ ಪಾವತಿಸಬೇಕು. ಹುಂಡಿಯನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ **"Secretary,KSREEB,Bangalore"** ಎಂದು ಪಡೆದು ಸಲ್ಲಿಸಬೇಕು.

ಭೂ, ವಾಯು ,ನೌಕಾಪಡೆ ಹಾಗೂ ಆರಕ್ಷಕ ಕಛೇರಿಗಳಿಂದ ಬರುವ ಅಂಕಪಟ್ಟಿಗಳಿಗೆ ಪರಿಶೀಲನಾ ಶುಲ್ಕ ಇರುವುದಿಲ್ಲ.

## ಅಂಕಪಟ್ಟಿ ನೈಜತೆ ಪರಿಶೀಲನೆಗೆ ಯಾವ ಕಛೇರಿಗೆ ಪ್ರಸ್ತಾವನೆ ಕಳಿಸಬೇಕು?

**ವಿದ್ಯಾರ್ಥಿ ಪಾಸಾದ ವರ್ಷದ ನವೆಂಬರ್ ತಿಂಗಳೊಳಗೆ ಅಥವಾ 1963 ಹಾಗೂ ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿನೈಜತೆ ಪರಿಶೀಲನೆಗೆ ಪ್ರಸ್ತಾವನೆಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾಮಂಡಳಿ ಕೇಂದ್ರ ಕಛೇರಿಗೆ ರವಾನಿಸಬೇಕು.**

**1963 ರ ನಂತರದ ವರ್ಷಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಪಟ್ಟಿನೈಜತೆ ಪರಿಶೀಲನೆಗೆ ಪ್ರಸ್ತಾವನೆಯನ್ನು ಸಂಬಂಧಿಸಿದ ವಿಭಾಗೀಯ ಕಛೇರಿಗಳಿಗೆ ರವಾನಿಸಬೇಕು.**

**ಸೇವೆ ನೀಡಲು ನಿಗದಿಪಡಿಸಿರುವ ಸಮಯ : 30 ದಿನಗಳು**
**ತುರ್ತು ಸೇವೆ : 5 ದಿನಗಳು**